November 18, 2025

The Manager - Listing
National Stock Exchange of India Limited
(NSE: WIPRO)

The Manager - Listing
BSE Limited
(BSE: 507685)

Dear Sir/Madam,

Sub: Newspaper Advertisement - Regulation 47 of SEBI (Listing Obligations and Disclosure Requirements) Regulations, 2015

Pursuant to Regulation 47 of the SEBI (Listing Obligations and Disclosure Requirements) Regulations, 2015, the copies of the newspaper advertisement published in the Business Standard and Kannada Prabha are enclosed herewith. The same has been made available on the Company's website at www.wipro.com.

Thanking You.

For Wipro Limited

Sanaulla Khan Mohammed

Digitally signed by Sanaulla Khan Mohammed
Date: 2025.11.18 17:49:05 +05'30'

M Sanaulla Khan
Company Secretary

Registered Office:

Wipro Limited
Doddakannelli
Sarjapur Road
Bengaluru 560 035
India

T : +91 (80) 2844 0011
F : +91 (80) 2844 0054
E : info@wipro.com
W : wipro.com
C : L32102KA1945PLC020800

NJ CAPITAL

NJ Capital Private Limited
(CIN:U67120GJ2009PTC057351)
Registered Office Address: Block No 501, 2nd Floor, C Tower, Udhna Udyognagar Sangh Commercial Complex, Central Road No. 10, Udhna, Surat - 394210 | Phone No.: 026-16913301, Website: www.njcapital.in

Statement of unaudited financial results for the Quarter and Half Year ended September 30,2025

(Amount in INR Lakhs except EPS)

	Particulars	For the Quarter ended			For the Half Year ended		For the Year ended
		September 30, 2025 (Unaudited)	June 30, 2025 (Unaudited)	September 30, 2024 (Unaudited)	September 30, 2025 (Unaudited)	September 30, 2024 (Unaudited)	March 31, 2025 (Unaudited)
1.	Total Income from operations	2,991.64	2,731.48	1,877.44	5,723.12	3,434.02	8,083.90
2.	Net Profit/ (Loss) for the period (before Tax, Exceptional and/ or Extraordinary items#)	1,052.77	972.20	655.14	2,024.98	1,204.71	2,830.18
3.	Net Profit/ (Loss) for the period before tax (after Exceptional and/ or Extraordinary items#)	1,052.77	972.20	655.14	2,024.98	1,204.71	2,830.18
4.	Net Profit/ (Loss) for the period after tax (after Exceptional and/ or Extraordinary items#)	784.00	717.82	472.90	1,501.83	840.23	2,099.09
5.	Total Comprehensive Income for the period [Comprising Profit/ (Loss) for the period (after tax) and Other Comprehensive Income (after tax)]	784.00	717.82	474.23	1,501.83	842.89	2,104.42
6.	Paid up Equity Share Capital (Face Value Rs. 10 per share)	14,043.30	13,977.53	11,824.76	14,043.30	11,824.76	13,279.18
7.	Reserves (excluding Revaluation Reserve)	13,181.26	12,354.06	5,005.71	13,181.26	5,005.71	9,816.55
8.	Securities Premium Account	8,110.12	8,064.74	2,674.75	8,110.12	2,674.75	6,262.99
9.	Net worth	27,224.56	26,331.59	16,830.47	27,224.56	16,830.47	23,095.72
10.	Paid up Debt Capital/ Outstanding Debt	63,850.64	60,241.42	39,307.34	63,850.64	39,307.34	52,326.96
11.	Outstanding Redeemable Preference Shares	276.00	276.00	276.00	276.00	276.00	276.00
12.	Debt Equity Ratio	2.35	2.29	2.34	2.35	2.34	2.27
13.	Earnings Per Share (Basic - Rs.)	0.56	0.54	0.40	1.10	0.79	1.71
	Earnings Per Share (Diluted - Rs.)	0.54	0.51	0.38	1.05	0.75	1.63
14.	Debt Service Coverage Ratio	N.A.	N.A.	N.A.	N.A.	N.A.	N.A.
15.	Interest Service Coverage Ratio	N.A.	N.A.	N.A.	N.A.	N.A.	N.A.

NOTE:

a) The above is an extract of the detailed format of financial results for the quarter and half year ended September 30, 2025 filed with the Stock Exchange(s) under regulation 52 of the Securities and Exchange Board of India ("SEBI") Listing Obligations and Disclosure Requirements Regulations, 2015. The full format of the financial results for the quarter and half year ended September 30, 2025 is available on the websites of the BSE Limited (www.bseindia.com) and website of the Company (https://www.njcapital.in/).

b) For the other line items referred in regulation 52(4) of the SEBI (Listing Obligations and Disclosure Requirements) Regulations, 2015, the pertinent disclosures have been made to the websites of the BSE Limited (www.bseindia.com) and website of the Company (https://www.njcapital.in/).

For NJ Capital Private Limited
Sd/-
Chaitanya Chunduri
Place: Surat **Director and CFO**
Date: 14 November 2025 **DIN: 03517790**

ಬಿಹಾರದಲ್ಲಿ ನಡೆದ ವಿಧಾನಸಭೆ ಚುನಾವಣೆಯಲ್ಲಿ ಕೇಂದ್ರ ಸರ್ಕಾರ ಪ್ರಜಾಪ್ರಭುತ್ವ ವ್ಯವಸ್ಥೆಯ ವಿರುದ್ಧವಾಗಿ ತನ್ನ ಅಧಿಕಾರ ದುರುಪಯೋಗಪಡಿಸಿಕೊಂಡು ಗೆದ್ದಿದೆಯೇ ಹೊರತು ಪ್ರಜಾಪ್ರಭುತ್ವ ವ್ಯವಸ್ಥೆಯಡಿ ಗೆದ್ದಿಲ್ಲ.
• **ಕೆ.ಎಚ್.ಮುನಿಯಪ್ಪ** ಆಹಾರ ಸಚಿವ

ಸುದ್ದಿ ಸಿಂಚನ

ರಾಜಕೀಯ ವಿಚಾರದಲ್ಲಿ ನನಗೆ ಎಬಿಸಿಡಿ ಗೊತ್ತಿಲ್ಲ: ಸ್ಪೀಕರ್ ಖಾದರ್ ಹೇಳಿಕೆ

ಬೆಂಗಳೂರು: ಪ್ರಸ್ತುತ ರಾಜಕೀಯದಲ್ಲಿ ನಡೆಯುತ್ತಿರುವ ವಿಚಾರದಲ್ಲಿ ನನಗೆ ಎಬಿಸಿಡಿ ಗೊತ್ತಿಲ್ಲ ಎಂದು ವಿಧಾನಸಭೆ ಸ್ಪೀಕರ್ ಯು.ಟಿ.ಖಾದರ್ ಹೇಳಿದ್ದಾರೆ. ವಿಧಾನಸೌಧದ ಕೆಂಗಲ್ ಗೇಟ್ ಬಳಿ ಅಳವಡಿಸಿರುವ ಕುಡಿಯುವ ನೀರಿನ ಘಟಕವನ್ನು ಸೋಮವಾರ ಲೋಕಾರ್ಪಣೆಗೊಳಿಸಿ ಸುದ್ದಿಗಾರರೊಂದಿಗೆ ಮಾತನಾಡಿ, ಮುಂದಿನ ಡಿ.8ರಿಂದ 19ರವರೆಗೆ ಬೆಳಗಾವಿ ಅಧಿವೇಶನ ನಡೆಸುವ ಸಂಬಂಧ ಆಡಳಿತ ಪಕ್ಷ ಮತ್ತು ವಿರೋಧ ಪಕ್ಷ ವಿಶ್ವಾಸಕ್ಕೆ ತೆಗೆದುಕೊಳ್ಳಬೇಕು. ಅಧಿವೇಶನದಲ್ಲಿ ಉತ್ತರ ಕರ್ನಾಟಕಕ್ಕೆ ಪ್ರಯೋಜನ ಆಗಬೇಕು ಎಂಬುದಷ್ಟೇ ಚಿಂತನೆಯಿದೆ. ರಾಜಕೀಯದಲ್ಲಿ ಏನಾಗುತ್ತಿದೆ ಎಂಬುದು ನನಗೆ ಗೊತ್ತಿಲ್ಲ ಎಂದರು.

ಸ್ಕೂಟರ್‌ಗೆ ಲಾರಿ ಡಿಕ್ಕಿ: ಮಹಿಳೆ ಸ್ಥಳದಲ್ಲೇ ಸಾವು

ದೇವನಹಳ್ಳಿ: ಸ್ಕೂಟರ್ ಹಾಗೂ ಟಿಪ್ಪರ್ ನಡುವೆ ಅಪಘಾತ ಸಂಭವಿಸಿ ಸ್ಕೂಟರ್ ಚಲಾಯಿಸುತ್ತಿದ್ದ ಅನಿತ ಸ್ಥಳದಲ್ಲೇ ಮೃತಪಟ್ಟಿದ್ದು, ಹಿಂಬದಿ ಕುಳಿತಿದ್ದ ಲಕ್ಷ್ಮೀದೇವಿಗೆ ಗಾಯಗೊಂಡಿರುವ ಘಟನೆ ಪಟ್ಟಣದ ರಾಣಿ ಕ್ರಾಸ್ ಬಳಿ ನಡೆದಿದೆ. ಗಾಯಾಳು ಆಕಾಶ್ ಚಿಕಿತ್ಸೆ ಪಡೆಯುತ್ತಿದ್ದಾರೆ.

ಇನ್ನು ಪಟಾಕಿ ಸಿಡಿಸಿದ್ರೆ ಕೆಮರಾಗೆ ಸಿಕ್ಕಿಬೀಳ್ತೀರಿ!

ದೃಶ್ಯ ಸೆರೆ ಹಿಡಿದು ನಿಯಂತ್ರಣ ಕೊಠಡಿಗೆ ರವಾನಿಸುವ ನಿರ್ಭಯಾ ಕ್ಯಾಮೆರಾ | ಇದಕ್ಕಾಗಿ ಪೊಲೀಸರಿಂದ ಹೊಸ ಸಾಫ್ಟ್‌ವೇರ್ ಬಳಕೆ

• **ಮಂಜುನಾಥ್ ಕೆ.**
ಕನ್ನಡಪ್ರಭ ವಾರ್ತೆ ಬೆಂಗಳೂರು

ನಗರದಲ್ಲಿ ಇನ್ನು ಮುಂದೆ ಅವಧಿ ಮೀರಿ ಪಟಾಕಿ ಹೊಡೆಯುವವರು ನೂರು ಬಾರಿ ಯೋಚಿಸಿ. ಇಲ್ಲವಾದರೆ ಕಾನೂನಿನ ಸಂಕಷ್ಟ ಎದುರಿಸಬೇಕಾದೀತು.

ನಗರದಲ್ಲಿ ಈಗಾಗಲೇ ಅಳವಡಿಸಿರುವ ಕ್ಯಾಮೆರಾಗಳಿಗೆ ಕೃತಕ ಬುದ್ಧಿಮತ್ತೆ (ಎಐ) ಆಧಾರಿತ ಸಾಫ್ಟ್‌ವೇರ್ ಒಂದನ್ನು ಪ್ರಾಯೋಗಿಕವಾಗಿ ಅಳವಡಿಸಿದ್ದು, ಅದು ಯಶಸ್ವಿಯಾಗಿದ್ದರಿಂದ ಅಗತ್ಯ ಬಿದ್ದಾಗ ಇತರೆ ಕ್ಯಾಮೆರಾಗಳಿಗೂ ವಿಸ್ತರಿಸಲು ನಗರ ಪೊಲೀಸರು ಚಿಂತನೆ ನಡೆಸಿದ್ದಾರೆ.

ಈ ಸಾಫ್ಟ್‌ವೇರ್ ಪಟಾಕಿ ಹೊಡೆದವರ ದೃಶ್ಯವನ್ನು ಕ್ಯಾಮೆರಾ ಮೂಲಕ ಸೆರೆ ಹಿಡಿದು ಪೊಲೀಸ್ ನಿಯಂತ್ರಣ ಕೊಠಡಿಗೆ ಎಚ್ಚರಿಕೆ ಸಂದೇಶ ಕಳುಹಿಸುತ್ತದೆ. ಆ ದೃಶ್ಯ ಆಧರಿಸಿ ಪೊಲೀಸರು ಅವಧಿ ಮೀರಿ ಪಟಾಕಿ ಹೊಡೆದವರನ್ನು ಪತ್ತೆ ಹಚ್ಚಿ ಕಾನೂನು ಕ್ರಮ ಜರುಗಿಸಲಿದ್ದಾರೆ. ಈ ಸಂಬಂಧ ಪ್ರಾಯೋಗಿಕ ಪರೀಕ್ಷೆಯನ್ನು ನಗರ ಪೊಲೀಸರು ನಡೆಸಿದ್ದಾರೆ. ಇದನ್ನು ನಗರದಲ್ಲಿರುವ ಕೆಲ ಕ್ಯಾಮೆರಾಗಳಿಗೆ ಅಳವಡಿಸುವ ಬಗ್ಗೆ ಚಿಂತನೆ ನಡೆಸಿದ್ದಾರೆ ಎಂದು ಉನ್ನತ ಮೂಲಗಳು ತಿಳಿಸಿವೆ. ರಾತ್ರಿ 10 ಗಂಟೆಯಿಂದಲೂ ನಮ್ಮ ಮನೆ ಬಳಿ ಪಟಾಕಿ ಸಿಡಿಸಿ ತೊಂದರೆ ಕೊಡುತ್ತಿದ್ದಾರೆ ಎಂದು ನಗರ ಪೊಲೀಸ್ ನಿಯಂತ್ರಣ ಕೊಠಡಿಗೆ ವಸತಿ ಪ್ರದೇಶಗಳಿಂದ ಹಲವು ದೂರುಗಳು ಬರುತ್ತಿರುತ್ತವೆ. ಅದರಲ್ಲಿಯೂ ದೀಪಾವಳಿ ಹಬ್ಬದ ಆಚರಣೆ ಸಮಯದಲ್ಲಿ ಹೆಚ್ಚಿನ ದೂರುಗಳು ಪೊಲೀಸ್ ನಿಯಂತ್ರಣ ಕೊಠಡಿಗೆ ಬರುತ್ತವೆ. ದೀಪಾವಳಿಯ ಜತೆಗೆ, ಹುಟ್ಟುಹಬ್ಬದ ಪಾರ್ಟಿಗಳು, ವಿವಾಹ ವಾರ್ಷಿಕೋತ್ಸವಗಳು, ಹುಟ್ಟುಹಬ್ಬ ಇತ್ಯಾದಿಗಳನ್ನು ಆಚರಿಸಲು ಕೆಲವರು ಮಧ್ಯರಾತ್ರಿಯಲ್ಲಿ ಪಟಾಕಿಗಳನ್ನು ಸಿಡಿಸುತ್ತಾರೆ. ಈ ಬಗ್ಗೆ ಪೊಲೀಸರಿಗೆ ಆಗಾಗ್ಗೆ ಹಲವು ದೂರುಗಳು ಬರುತ್ತವೆ. ಆಗ, ಹೊಯ್ಸಳ ಸಿಬ್ಬಂದಿ ಸ್ಥಳಕ್ಕೆ ಧಾವಿಸಿ ಸಮಸ್ಯೆ ಪರಿಹರಿಸುತ್ತಿದ್ದರು.


ಎಐ ಆಧಾರಿತ ಕ್ಯಾಮೆರಾ ಹದ್ದಿನಕಣ್ಣು

> ನಗರದ ಕೆಲ ಪೊಲೀಸ್ ಠಾಣೆಗಳ ವ್ಯಾಪ್ತಿಯಲ್ಲಿ ಇದ್ದ ಕ್ಯಾಮರಾಗಳಿಗೆ ಎಐ ಆಧರಿತ ಸಾಫ್ಟ್‌ವೇರ್ ಒಂದನ್ನು ಅಳವಡಿಸಿ ಇತ್ತೀಚೆಗೆ ಪ್ರಾಯೋಗಿಕ ಪರೀಕ್ಷೆಯನ್ನು ನಡೆಸಲಾಗಿದೆ. ಆ ಸಾಫ್ಟ್‌ವೇರ್ ಒಳಗೊಂಡಿದ್ದ ಕ್ಯಾಮರಾಗಳು ಪಟಾಕಿಗಳ ಸಿಡಿತ ದೃಶ್ಯಗಳನ್ನು ಕಮಾಂಡ್ ಸೆಂಟರ್‌ಗೆ ಎಚ್ಚರಿಕೆ ರೀತಿ ಸಂದೇಶ ರವಾನಿಸಿದೆ. ಇದೊಂದು ಉಪಯುಕ್ತ ಸಾಫ್ಟ್‌ವೇರ್ ಆಗಿದ್ದು, ಇದನ್ನು ವಿವಿಧ ಉದ್ದೇಶಗಳಿಗಾಗಿ ಬಳಸಬಹುದಾಗಿದೆ. ಅಗತ್ಯವಿರುವ ಕಡೆ ಈ ಸಾಫ್ಟ್‌ವೇರ್ ಬಳಸಲಾಗುವುದು.
> • **ಸೀಮಂತ್ ಕುಮಾರ್ ಸಿಂಗ್** ನಗರ ಪೊಲೀಸ್ ಆಯುಕ್ತ

ಆದರೆ ಇನ್ನು ಮುಂದೆ ಮಧ್ಯರಾತ್ರಿ ಅಥವಾ ನಿಗದಿತ ಸಮಯಕ್ಕಿಂತ ಹೆಚ್ಚು ಪಟಾಕಿ ಸಿಡಿಸುವ ಬಗ್ಗೆ ದೂರು ನೀಡಲು ಪೊಲೀಸ್ ನಿಯಂತ್ರಣ ಕೊಠಡಿಗೆ ಕರೆ ಮಾಡಬೇಕಾಗಿಲ್ಲ. ನಿರ್ಭಯಾ ಯೋಜನೆಯಡಿ ನಗರದಾದ್ಯಂತ ಅಳವಡಿಸಲಾಗಿರುವ ಕಣ್ಗಾವಲು ಕ್ಯಾಮೆರಾಗಳು ಪಟಾಕಿ ಸಿಡಿತವನ್ನು ಪತ್ತೆಹಚ್ಚಿ ಈ ಬಗ್ಗೆ ಪೊಲೀಸ್ ನಿಯಂತ್ರಣ ಕೊಠಡಿಗೆ ಎಚ್ಚರಿಕೆಯ ಸಂದೇಶ ನೀಡುತ್ತವೆ.

ಪ್ರಾಯೋಗಿಕ ಪರೀಕ್ಷೆ ಯಶಸ್ವಿ: ದೀಪಾವಳಿ ಹಬ್ಬದ ಸಂದರ್ಭದಲ್ಲಿ ನಗರ ಪೊಲೀಸರು ಈ ಕ್ಯಾಮೆರಾಗಳಲ್ಲಿ ಪಟಾಕಿ ಸಿಡಿತವನ್ನು ಪತ್ತೆಹಚ್ಚುವ ಕೃತಕ ಬುದ್ಧಿಮತ್ತೆ ಆಧಾರಿತ ಸಾಫ್ಟ್‌ವೇರ್ ಅನ್ನು ನಗರದ ಕೆಲ ಕ್ಯಾಮೆರಾಗಳಿಗೆ ಅಳವಡಿಸಿದ್ದರು. ನಗರದ ಶ್ರೀರಾಂಪುರ, ಮಲ್ಲೇಶ್ವರ, ಕೆ.ಆರ್. ಮಾರುಕಟ್ಟೆ, ಎಚ್‌ಎಸ್‌ಆರ್ ಲೇಔಟ್, ಹರಳೂರು, ಮಾರತಹಳ್ಳಿ ಮತ್ತು ಬೆಳ್ಳಂದೂರು ಮುಂತಾದ ಪ್ರದೇಶಗಳಲ್ಲಿ 200 ವಿಭಿನ್ನ ಸ್ಥಳಗಳಲ್ಲಿ ಈ ಪ್ರಯೋಗ ಐದು ದಿನಗಳ ಕಾಲ ನಡೆಯಿತು. ಈ ಕ್ಯಾಮರಾಗಳು ದಿನದ 24 ಗಂಟೆಯೂ ಪಟಾಕಿ ಸಿಡಿಸುವುದನ್ನು ಸೆರೆಹಿಡಿದಿವೆ.

ಐದು ದಿನಗಳ ನಡೆದ ಪರೀಕ್ಷಾ ಅವಧಿಯಲ್ಲಿ ಪಟಾಕಿ ಸಿಡಿತದ 2,000 ಎಚ್ಚರಿಕೆ ಸಂದೇಶಗಳನ್ನು ಪೊಲೀಸ್ ನಿಯಂತ್ರಣ ಕೊಠಡಿ ಸ್ವೀಕರಿಸಿದೆ. ಅವುಗಳಲ್ಲಿ ಸುಮಾರು 850 ಎಚ್ಚರಿಕೆ ಸಂದೇಶಗಳು (42.5%) ರಾತ್ರಿ 10 ಗಂಟೆಯ ನಂತರದವರೆಗಿನವು ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಈ ಉಪಕರಣ ನಮಗೆ ಬಹಳಷ್ಟು ಸಹಾಯ ಮಾಡುತ್ತದೆ ಮತ್ತು ಭವಿಷ್ಯದಲ್ಲಿ ಇದೊಂದು ಉಪಯುಕ್ತ ಸಾಫ್ಟ್‌ವೇರ್ ಆಗಲಿದೆ. ಇದನ್ನು ವಿವಿಧ ಉದ್ದೇಶಗಳಿಗಾಗಿ ಬಳಸಬಹುದು. ಇದು ಸಾಕ್ಷ್ಯ ಆಧಾರಿತ ಪೊಲೀಸ್ ವ್ಯವಸ್ಥೆಯಲ್ಲಿ ಒಂದು ಮೈಲಿಗಲ್ಲು ಆಗಿದೆ ಎಂದು ಆಡಳಿತ ವಿಭಾಗದ ಜಂಟಿ ಪೊಲೀಸ್ ಆಯುಕ್ತ ಕುಲದೀಪ್ ಕುಮಾರ್ ಜೈನ್ ತಿಳಿಸಿದ್ದಾರೆ.

ಈ ಸಾಫ್ಟ್‌ವೇರ್ ಅನ್ನು ಸ್ವಲ್ಪ ಮಾರ್ಪಾಡು ಮಾಡಿದರೆ ಕ್ಯಾಮರಾಗಳು ಹೊಗೆಯನ್ನೂ ಪತ್ತೆ ಮಾಡುತ್ತದೆ. ಎಐ ಆಧರಿತ ಸಾಫ್ಟ್‌ವೇರ್ ಅನ್ನು ನಿರ್ಭಯಾ ಯೋಜನೆಯಡಿ ಅಳವಡಿಸಲಾದ ಎಲ್ಲಾ ಕ್ಯಾಮರಾಗಳಿಗೆ ಮತ್ತು ಸಾರ್ವಜನಿಕರು ಅಳವಡಿಸಿದ ಕ್ಯಾಮರಾಗಳಿಗೆ ಸೇರಿಸುವುದು ಅಧಿಕಾರಿಗಳ ಮಾಹಿತಿ ನೀಡಿದ್ದಾರೆ.

ನಿರ್ಭಯಾ ಯೋಜನೆಯಡಿ ಬೆಂಗಳೂರಿನಲ್ಲಿ 9,000ಕ್ಕೂ ಹೆಚ್ಚು ಕ್ಯಾಮೆರಾಗಳನ್ನು ಅಳವಡಿಸಲಾಗಿದೆ ಮತ್ತು ಸಾರ್ವಜನಿಕ ಸುರಕ್ಷಾ ಕಾಯ್ದೆಯಡಿ ನಾಗರಿಕರು 5 ಲಕ್ಷಕ್ಕೂ ಹೆಚ್ಚು ಕ್ಯಾಮೆರಾಗಳನ್ನು ಅಳವಡಿಸಿಕೊಂಡಿದ್ದಾರೆ.

ಜನಸಂದಣಿ ಹೆಚ್ಚಾಗುವ ಸ್ಥಳಗಳಲ್ಲಿ, ಪ್ರತಿಭಟನೆಗಳ ಸಮಯದಲ್ಲಿ, ವಿಐಪಿಗಳು ರಸ್ತೆಯಲ್ಲಿ ಪ್ರಯಾಣಿಸುವಾಗ ಅಥವಾ ಹೋಟೆಲ್‌ನಲ್ಲಿ ವಾಸಿಸುವ ವಿಐಪಿಗಳು ಇತ್ಯಾದಿಗಳಲ್ಲಿ ಪಟಾಕಿ ಪತ್ತೆ ಸಾಧನವನ್ನು ಬಳಸಬಹುದು. ಈ ಉಪಕರಣವು ವಿವಿಧ ಸ್ಥಳಗಳಲ್ಲಿ ಮತ್ತು ವಿಭಿನ್ನ ಸಂದರ್ಭಗಳಲ್ಲಿಯೂ ಕಾರ್ಯನಿರ್ವಹಿಸಲಿದೆ.

ಲೈಂಗಿಕ ಕಿರುಕುಳ ದೂರು ನೀಡಿದ ನಟಿ ವಿರುದ್ಧವೇ ನಿರ್ಮಾಪಕನಿಂದ ಆರೋಪ

ಆಕೆಗೆ ₹3.5 ಕೋಟಿ ಖರ್ಚು | ಇನ್ನೂ ಮೂವರಿಗೆ ವಂಚನೆ: ಅರವಿಂದ್

• **ಕನ್ನಡಪ್ರಭ ವಾರ್ತೆ** ಬೆಂಗಳೂರು

'ಆ ನಟಿ ನನ್ನಂತೆಯೇ ಇನ್ನೂ ಮೂವರಿಗೆ ವಂಚನೆ ಮಾಡಿದ್ದಾರೆ. ಆ ಮೂವರು ನನ್ನ ಸಂಪರ್ಕಕ್ಕೆ ಬಂದಿದ್ದಾರೆ' ಎಂದು ಉದ್ಯಮಿ ಹಾಗೂ ಸಿನಿಮಾ ನಿರ್ಮಾಪಕ ಅರವಿಂದ್ ವೆಂಕಟೇಶ್ ಅವರು ತನ್ನ ವಿರುದ್ಧ ದೂರು ನೀಡಿದ ನಟಿ ವಿರುದ್ಧ ಮತ್ತೊಂದು ಗಂಭೀರ ಆರೋಪ ಮಾಡಿದ್ದಾರೆ.

ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಸ್ಯಾಂಡಲ್‌ವುಡ್ ನಟಿಗೆ ಲೈಂಗಿಕ ಕಿರುಕುಳ ಕೊಟ್ಟಿದ್ದಾರೆಂಬ ತಮ್ಮ ಮೇಲಿನ ಆರೋಪಗಳ ಬಗ್ಗೆ ಮಾತನಾಡಿದ ಅರವಿಂದ್ ವೆಂಕಟೇಶ್ ರೆಡ್ಡಿ, 'ನಾನು ಯಾರಿಗೂ ಲೈಂಗಿಕ ಕಿರುಕುಳ ನೀಡಿಲ್ಲ. ಯಾರನ್ನೂ ಹಿಂಬಾಲಿಸಿಯೂ ಇಲ್ಲ. ಆದರೆ, ನನ್ನ ಮೇಲೆ ಸುಳ್ಳು ಆರೋಪ ಮಾಡಿ ಬೀದಿಯಲ್ಲಿ ನಿಲ್ಲಿಸಿದ್ದಾರೆ. ನಾನೂ ಗೌರವಸ್ಥ ಕುಟುಂಬದಲ್ಲಿ ಹುಟ್ಟಿದವನು. ನನಗೆ ಮರ್ಯಾದೆ ಇದೆ. ಆಕೆ ಕಿರುಕುಳ ಅಂತ ನೀಡಿರುವ ದೂರನ್ನು ಮಾಧ್ಯಮಗಳು 'ಲೈಂಗಿಕ ಕಿರುಕುಳ' ಅಂತ ಬಿಂಬಿಸುತ್ತಿದ್ದಾರೆ' ಎಂದು ಬೇಸರ ತೋಡಿಕೊಂಡರು. 'ಆಕೆ ನನಗೆ ಮಾತ್ರವಲ್ಲ, ಮದುವೆ ಹೆಸರಿನಲ್ಲಿ ಇನ್ನೂ ಮೂವರಿಗೆ ಇದೇ ರೀತಿ ಮೋಸ ಮಾಡಿದ್ದಾರೆ. ಈಗ ಆ ಮೂವರು ನನ್ನನ್ನು ಸಂಪರ್ಕಿಸಿದ್ದಾರೆ. ಅವರಿಗೂ ಮದುವೆ ಆಗುತ್ತೇನೆ ಎಂದು ಹೇಳಿ ವಂಚನೆ ಮಾಡಿದ್ದಾಳೆಂದು ತಿಳಿದು ಬಂದಿದೆ. ಕೆಲವರ ಬಳಿ 80, 90 ಲಕ್ಷ ಹಣ ತೆಗೆದುಕೊಂಡು ಮೋಸ ಮಾಡಿದ್ದಾರೆ. ಹಣ ವಾಪಸ್ ಕೇಳಿದಾಗ ಆತ್ಮಹತ್ಯೆ ಮಾಡಿಕೊಳ್ಳುವುದಾಗಿ ಬ್ಲ್ಯಾಕ್ ಮೇಲ್ ಮಾಡಿದ್ದಾರಂತೆ. ಆಕೆಯಿಂದ ಮೋಸ ಹೋದವರ ಪೈಕಿ ಒಬ್ಬರಿಗೆ ಈಗ ನಿಶ್ಚಿತಾರ್ಥ ಆಗಿದೆ. ಅವರು ಬೆಂಗಳೂರಿನವರೇ. ಮತ್ತೊಬ್ಬರು ಅಮೆರಿಕದಲ್ಲಿದ್ದಾರೆ. ನಾನೂ ಕಾರು, ಸೈಟು ಬಿಟ್ಟು ಆ ನಟಿಗೆ 2 ರಿಂದ 2.5 ಕೋಟಿ ಖರ್ಚು ಮಾಡಿದ್ದೇನೆ. ಎಲ್ಲಾ ಸೇರಿದರೆ 3.25ರಿಂದ 3.5 ಕೋಟಿ ನಾನು ಆ ನಟಿಗೆ ಖರ್ಚು ಮಾಡಿದ್ದೇನೆ' ಎಂದರು.

'ಈಗ ನಾನು ಮಾಧ್ಯಮಗಳ ಮುಂದೆ ಬರಲು ಕಾರಣ ನಾನು ಆಕೆಗೆ ಲೈಂಗಿಕ ಕಿರುಕುಳ ಕೊಟ್ಟಿದ್ದೇನೆ ಎನ್ನುವುದಕ್ಕೆ ಸ್ಪಷ್ಟನೆ ಕೊಡಲು. ನನಗೆ ಆ ನಟಿ ಪರಿಚಯ ಆಗಿದ್ದು 2017ರಲ್ಲಿ. ನಾವಿಬ್ಬರು ಜೊತೆಗೆ ಇದ್ವಿ. 2023ರ ಜೂನ್ ತಿಂಗಳಲ್ಲಿ ನಿಶ್ಚಿತಾರ್ಥ ಮಾಡಿಕೊಂಡು ಮದುವೆ ಆಗುವುದಕ್ಕೂ ಪ್ಲಾನ್ ಮಾಡಿಕೊಂಡಿದ್ದೆವು. ಆದರೆ, ಅದು ಸಾಧ್ಯವಾಗದೆ ಇಬ್ಬರೂ ದೂರ ಆದೆವು. ನಾನು ಎರಡು ವರ್ಷಗಳಿಂದ ಆಕೆ ಜೊತೆಗೆ ಇರಲಿಲ್ಲ' ಎಂದರು.

ನಗರಾಭಿವೃದ್ಧಿಗೆ ಮೆಲ್ಬೋರ್ನ್ ಮಾದರಿ

ಒಪ್ಪಂದ ಪತ್ರಕ್ಕೆ ಸಹಿ ಹಾಕಿದ ಜಿಬಿಎ ಆಯುಕ್ತ, ಮೆಲ್ಬೋರ್ನ್ ಮೇಯರ್

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಆಸ್ಟ್ರೇಲಿಯಾದ ಮೆಲ್ಬೋರ್ನ್ ನಗರವು, ಬೆಂಗಳೂರು ನಗರದ 'ಸಿಸ್ಟರ್ ಸಿಟಿ' ಆಗಿ ಮೆಲ್ಬೋರ್ನ್ ಮಾದರಿಯಲ್ಲಿ ಅಭಿವೃದ್ಧಿಗೆ ಮಾರ್ಗದರ್ಶನ ಮಾಡಲಿದೆ.

ಈ ಸಂಬಂಧ ಜಿಬಿಎ ಮುಖ್ಯ ಆಯುಕ್ತ ಮಹೇಶ್ವರ್‌ರಾವ್ ಹಾಗೂ ಆಸ್ಟ್ರೇಲಿಯಾದ ಮೆಲ್ಬೋರ್ನ್ ನಗರದ ಲಾರ್ಡ್ ಮೇಯರ್ ನಿಕೋಲಸ್ ರೀಸ್ ನಗರದಲ್ಲಿ ಸೋಮವಾರ ತಿಳಿವಳಿಕೆ ಪತ್ರಕ್ಕೆ ಸಹಿ ಹಾಕಿದರು.

ನಗರ ನಾವೀನ್ಯತೆ ಮತ್ತು ಸ್ಮಾರ್ಟ್ ಸಿಟಿ, ತಂತ್ರಜ್ಞಾನ ಮತ್ತು ನಾವೀನ್ಯ ಪರಿಸರ ವ್ಯವಸ್ಥೆಗಳು, ಸುಸ್ಥಿರತೆ ಮತ್ತು ಹವಾಮಾನ, ಶಿಕ್ಷಣ, ಜ್ಞಾನ ವಿನಿಮಯ, ಸಾಂಸ್ಕೃತಿಕ ಚಟುವಟಿಕೆಗಳು ಮತ್ತು ಕ್ರೀಡಾ ವಿಚಾರಗಳಲ್ಲಿ ಪರಸ್ಪರ ಸಹಕಾರವನ್ನು ಪಡೆಯಲಾಗುತ್ತದೆ.

ಈ ವೇಳೆ ಮಾತನಾಡಿದ ನಗರಾಭಿವೃದ್ಧಿ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ತುಷಾರ್‌ಗಿರಿನಾಥ್, ಮೆಲ್ಬೋರ್ನ್ ನಗರ ಹಾಗೂ ಬೆಂಗಳೂರು ನಗರಗಳ ನಡುವಿನ ವ್ಯವಸ್ಥಿತ ಮಾಹಿತಿ ವಿನಿಮಯ ಮತ್ತು ಅನುಭವ ಹಂಚಿಕೆಯು ಎರಡು ನಗರಗಳ ಅಭಿವೃದ್ಧಿಗೆ ದಾರಿಯಾಗಲಿದೆ ಎಂದು ತಿಳಿಸಿದರು. ಜಿಬಿಎ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಮಾತನಾಡಿ, ಬೆಂಗಳೂರು ನಗರಾಭಿವೃದ್ಧಿ ಕಾರ್ಯಗಳಿಗೆ ಒಪ್ಪಂದದಿಂದ ಅನುಕೂಲವಾಗಲಿದೆ ಎಂದರು. ಮೆಲ್ಬೋರ್ನ್ ಲಾರ್ಡ್ ಮೇಯರ್ ನಿಕೋಲಸ್ ರೀಸ್ ಮಾತನಾಡಿ, ಎರಡೂ ನಗರಗಳ ಹೊಸತನ ಮತ್ತು ಅಭಿವೃದ್ಧಿಯನ್ನು ಉತ್ತೇಜಿಸುವ ಎಐ ಆಧಾರಿತ ಪರಿಹಾರ ಕ್ರಮಗಳನ್ನು ರೂಪಿಸಲು ನಾವು ಸಿದ್ಧರಿದ್ದೇವೆ ಎಂದು ಹೇಳಿದರು.

ಸಮಾಜ ಒಗ್ಗೂಡಿಸುವ ಶಕ್ತಿ ಜಾನಪದ ಸಾಹಿತ್ಯಕ್ಕಿದೆ: ಸಂಸದ

ಜಾನಪದ ಇಂದಿನ ತಲೆಮಾರಿಗೆ ಅಗತ್ಯ: ಡಾ.ಮಂಜುನಾಥ್ | ಕಲಾವಿದ ಟಿ.ಲಕ್ಷ್ಮಿಪತಿಗೆ ನಾಡೋಜ ನಾಗೇಗೌಡ ಪ್ರಶಸ್ತಿ ಪ್ರದಾನ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ನಾವೆಲ್ಲ ಒಟ್ಟಿಗೆ ಇರಬೇಕೆಂಬ ಸಹಬಾಳ್ವೆಯ ಆಶಯವಿರುವ ಜಾನಪದ ಸಾಹಿತ್ಯವನ್ನು ಇಂದಿನ ತಲೆಮಾರು ಬದುಕಿನಲ್ಲಿ ಅಳವಡಿಸಿಕೊಳ್ಳಬೇಕು ಎಂದು ಸಂಸದ ಡಾ.ಸಿ.ಎನ್.ಮಂಜುನಾಥ್ ಹೇಳಿದರು.

ಸೋಮವಾರ ರವೀಂದ್ರ ಕಲಾಕ್ಷೇತ್ರದಲ್ಲಿ ಕರ್ನಾಟಕ ಜಾನಪದ ಪರಿಷತ್ತು ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ತಮಿಳುನಾಡಿನ ತೆರುಕೂತು ಜನಪದ ರಂಗಭೂಮಿ ಕಲಾವಿದ ಟಿ.ಲಕ್ಷ್ಮಿಪತಿ ಅವರಿಗೆ ಜಾನಪದ ತಜ್ಞ 'ನಾಡೋಜ ಎಚ್.ಎಲ್.ನಾಗೇಗೌಡ ರಾಷ್ಟ್ರೀಯ ಪ್ರಶಸ್ತಿ' ಪ್ರದಾನ ಮಾಡಿ ಮಾತನಾಡಿದರು.

ಜಾನಪದ ಸಾಹಿತ್ಯದಲ್ಲಿ ಸಮಾಜವನ್ನು ಒಗ್ಗೂಡಿಸುವಂತಹ ಮಹತ್ ಶಕ್ತಿಯಿದೆ. ಇಂದು ವಿದ್ಯಾವಂತರಿಂದಲೇ ಸಮಾಜ ಒಡೆದು ಹೋಗುತ್ತಿದೆ. ದೇಶದಲ್ಲಿ ಭಯೋತ್ಪಾದಕ ವಾತಾವರಣ ಹೆಚ್ಚಾಗುತ್ತಿದ್ದು ಸಹಬಾಳ್ವೆ ಪುಸ್ತಕಕ್ಕೆ ಮಾತ್ರ ಸೀಮಿತವಾಗುತ್ತಿದೆ ಎಂದು ಬೇಸರ ವ್ಯಕ್ತಪಡಿಸಿದರು.


ನಗರದ ರವೀಂದ್ರ ಕಲಾಕ್ಷೇತ್ರದಲ್ಲಿ ಕರ್ನಾಟಕ ಜಾನಪದ ಪರಿಷತ್ತು ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಬೆಂಗಳೂರು ಗ್ರಾಮಾಂತರ ಕ್ಷೇತ್ರದ ಸಂಸದ ಡಾ.ಸಿ.ಎನ್. ಮಂಜುನಾಥ್ ಅವರು ಟಿ.ಲಕ್ಷ್ಮಿಪತಿ ಅವರಿಗೆ ನಾಡೋಜ ಎಚ್.ಎಲ್.ನಾಗೇಗೌಡ ರಾಷ್ಟ್ರೀಯ ಪ್ರಶಸ್ತಿ ಪ್ರದಾನ ಮಾಡಿದರು.

ಜನಪದ ತಜ್ಞ ಎಚ್.ಎಲ್.ನಾಗೇಗೌಡ ಅವರು ಭೌತಿಕವಾಗಿ ನಮ್ಮೊಂದಿಗೆ ಇಲ್ಲದಿದ್ದರೂ ಜಾನಪದ ಲೋಕಕ್ಕೆ ಕೊಟ್ಟಿರುವ ಅವರ ಕೊಡುಗೆಗಳ ಮೂಲಕ ನಮ್ಮೊಳಗೆ ಸದಾ ಜೀವಂತವಾಗಿರುತ್ತಾರೆ. ಜಾನಪದ ಲೋಕಕ್ಕೆ ಯುನೆಸ್ಕೋದಿಂದ ಮಾನ್ಯತೆ ದೊರಕಿರುವುದು ಹೆಮ್ಮೆಯ ವಿಚಾರ.

ಜಾನಪದ ಲೋಕಕ್ಕೆ ಕಾಂಪೌಂಡ್ ಕೂಡ ಇಲ್ಲ ಎಂದು ಅಧ್ಯಕ್ಷರು ಹೇಳುತ್ತಿದ್ದಾರೆ. ಸಂಸದರ ಕ್ಷೇತ್ರಾಭಿವೃದ್ಧಿ ನಿಧಿಯಿಂದ ಸಹಕಾರ ನೀಡುತ್ತೇನೆ ಎಂದು ಭರವಸೆ ನೀಡಿದರು.

ಹಿರಿಯ ಸಾಹಿತಿ ಪ್ರೊ.ಎಸ್.ಜಿ.ಸಿದ್ದರಾಮಯ್ಯ, ಕರ್ನಾಟಕ ಜಾನಪದ ಪರಿಷತ್ತಿನ ಅಧ್ಯಕ್ಷ ಪ್ರೊ.ಹಿ.ಚಿ.ಬೋರಲಿಂಗಯ್ಯ ಮಾತನಾಡಿದರು.

ಕಾರ್ಯಕ್ರಮದಲ್ಲಿ ನಾಡೋಜ ಎಚ್.ಎಲ್.ನಾಗೇಗೌಡ ರಾಷ್ಟ್ರೀಯ ಪ್ರಶಸ್ತಿ ಪುರಸ್ಕೃತ ಟಿ.ಲಕ್ಷ್ಮಿಪತಿ, ಕರ್ನಾಟಕ ಜಾನಪದ ಪರಿಷತ್ತಿನ ವ್ಯವಸ್ಥಾಪಕ ಟ್ರಸ್ಟಿ ಆದಿತ್ಯ ನಂಜರಾಜ್ ಸೇರಿದಂತೆ ಇತರರು ಇದ್ದರು.

ನಾರಾಯಣ ಶಾಲೆಗಳಲ್ಲಿ ಕೌಶಲ್ಯ ವಿಷಯ ಬೋಧನೆ

ಈ ಶಾಲೆಗಳಲ್ಲಿ 13 ಸಾವಿರ ವಿದ್ಯಾರ್ಥಿಗಳಿಗೆ ಅವಕಾಶ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಪ್ರತಿಷ್ಠಿತ ನಾರಾಯಯಣ ಸಮೂಹ ಶಿಕ್ಷಣ ಸಂಸ್ಥೆಯು ತನ್ನ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳ ಉತ್ತಮ ಭವಿಷ್ಯ ದೃಷ್ಟಿಯಿಂದ ಪ್ರೌಢಶಾಲಾ ಹಂತದಲ್ಲೇ ಆಧುನಿಕ ಕಾಲಘಟ್ಟಕ್ಕೆ ಅವಶ್ಯವಾದ ಹತ್ತಾರು ಕೌಶಲ್ಯ ವಿಷಯಗಳನ್ನು ಪಠ್ಯದಲ್ಲಿ ಸೇರಿಸುವ ಯೋಜನೆ ಘೋಷಿಸಿದೆ.

ನಗರದಲ್ಲಿ ಸಂಸ್ಥೆಯು ಇತ್ತೀಚೆಗೆ ಆಯೋಜಿಸಿದ್ದ 'ಕ್ಲಬ್ಸ್ ಕಲ್ಮಿನೇಶನ್ 2025' ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ನಾರಾಯಣ ಗ್ರೂಪ್ ಆಫ್ ಸ್ಕೂಲ್ಸ್ ನಿರ್ದೇಶಕಿ ಡಾ.ಪಿ.ಸಿಂಧೂರಾ ನಾರಾಯಣ ಈ ಮಹತ್ವದ ನಿರ್ಧಾರ ಪ್ರಕಟಿಸಿದ್ದು, ಡಿಜಿಟಲ್ ಕ್ರಿಯೇಟಿವಿಟಿ, ಡಿಸೈನ್ ಮತ್ತು ಮೀಡಿಯಾ, ರೋಬೋಟಿಕ್ಸ್, ಏರೋಸ್ಪೇಸ್ ಮತ್ತು ನವೀನತೆ, ಹಣಕಾಸು ಸಾಕ್ಷರತೆ, ಉದ್ಯಮಶೀಲತೆ ಮತ್ತು ಸ್ಟಾರ್ಟಪ್ ಚಿಂತನೆ, ಸಂವಹನ, ರಾಜತಾಂತ್ರಿಕತೆ, ವಾದ, ವಿವಾದ ಮತ್ತು ಜಾಗತಿಕ ವಿಷಯಗಳು, ಹಣಕಾಸು ಜ್ಞಾನ, ಉದ್ಯಮಶೀಲತೆ, ಡಿಜಿಟಲ್ ಲಿಟರಸಿ, ವಿನ್ಯಾಸ ಚಿಂತನೆ, ಸಮಸ್ಯಾ ಪರಿಹಾರ, ಸ್ಟೆಮ್ ಕಲಿಕೆ ಮುಂತಾದ ಜೀವನ ಕೌಶಲ್ಯಗಳನ್ನು ಪ್ರೌಢ ಶಾಲಾ ಹಂತದ ಪಠ್ಯದಲ್ಲೇ ಸೇರಿಸಿ ಪ್ರತಿ ವಿದ್ಯಾರ್ಥಿಗೂ ಕಲಿಸುತ್ತೇವೆ. ಸಂಸ್ಥೆಯ ಕರ್ನಾಟಕದ ಶಾಲೆಗಳಲ್ಲಿ ಕಲಿಯುತ್ತಿರುವ 13 ಸಾವಿರ ವಿದ್ಯಾರ್ಥಿಗಳಿಗೆ ವಿಶೇಷ ಅವಕಾಶ ದೊರೆಯಲಿದೆ ಎಂದರು.

- ವಿದ್ಯಾರ್ಥಿಗಳ ಉತ್ತಮ ಭವಿಷ್ಯ ದೃಷ್ಟಿಯಿಂದ ಪ್ರೌಢಶಾಲಾ ಹಂತದಲ್ಲೇ ಬೋಧನೆಗೆ ವ್ಯವಸ್ಥೆ
- ಡಿಜಿಟಲ್ ಕ್ರಿಯೇಟಿವಿಟಿ, ಡಿಸೈನ್, ಮೀಡಿಯಾ, ರೋಬೋಟಿಕ್ಸ್ ವಿಷಯ
- ಕ್ಲಬ್ ಕಲ್ಮಿನೇಷನ್ ಕಾರ್ಯಕ್ರಮದಲ್ಲಿ ನಿರ್ದೇಶಕಿ ಸಿಂಧೂರಾ ಅವರಿಂದ ಪ್ರಕಟಣೆ

ವೇಗವಾಗಿ ಬದಲಾಗುತ್ತಿರುವ ಜಗತ್ತಿಗೆ ವಿದ್ಯಾರ್ಥಿಗಳನ್ನು ಸಿದ್ಧಗೊಳಿಸಲು ಸಂಸ್ಥೆಯು ಶಾಲೆಗಳ ಶಿಕ್ಷಣ ವ್ಯವಸ್ಥೆಯಲ್ಲಿ ನಿರಂತರ ಸುಧಾರಣೆಗಳನ್ನು ಮಾಡಿಕೊಳ್ಳುತ್ತಿದೆ ಸೃಜನಶೀಲತೆ, ಡಿಜಿಟಲ್ ಸಾಮರ್ಥ್ಯ, ಹಣಕಾಸು ಜ್ಞಾನ, ನವೀನತೆ, ಜಾಗತಿಕ ಅರಿವು ಎಲ್ಲವೂ ಅಗತ್ಯ. ನಮ್ಮ ಕ್ಲಬ್‌ಗಳ ರೂಪಕವು ಹೊಸ ಯುಗದ ಕೌಶಲ್ಯಗಳನ್ನು ಪಠ್ಯಕ್ರಮದೊಂದಿಗೆ ಸಂಯೋಜಿಸಿ, ಕಲಿಕೆಯನ್ನು ಅರ್ಥಪೂರ್ಣವಾಗಿಯೂ ಪ್ರಾಯೋಗಿಕವಾಗಿಯೂ ರೂಪಿಸುತ್ತದೆ ಎಂದು ವಿವರಿಸಿದರು.

ಕ್ಲಬ್ಸ್ ಕಲ್ಮಿನೇಶನ್ 2025 ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು ತಮ್ಮ ಪ್ರಾಜೆಕ್ಟ್‌ಗಳನ್ನು, ಮಾದರಿಗಳನ್ನು, ನವೀನ ಪರಿಕಲ್ಪನೆಗಳನ್ನು, ಕಲಾಕೃತಿಗಳನ್ನು, ಹಣಕಾಸು ಮಾದರಿಗಳನ್ನು, ನೀತಿನಿರ್ಮಾಣ ಚರ್ಚೆಗಳನ್ನು ಪ್ರಸ್ತುತಪಡಿಸಿದರು.